**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 20.08.2021.**

**1] ಸಿಂದಗಿ ಪೊಲೀಸ ಠಾಣೆ ಗುನ್ನೆ ನಂ: 237/2021 ಕಲಂ: 78(3) ಕೆ.ಪಿ.ಆ್ಯಕ್ಟ್**

ದಿನಾಂಕ: 18.08.2021 ರಂದು 16.45 ಗಂಟೆಗೆ, ಇದರಲ್ಲಿ ಆರೋಪಿತರಾದ- ಮೈಬೂಬ ತಂ. ದೌಲಸಾಬ ಕಕ್ಕಳಮೇಲಿ ವಯಾ-26 ವರ್ಷ, ಜಾತಿ-ಮುಸ್ಲಿಂ, ಉದ್ಯೋಗ-ಅಟೋ ಚಾಲಕ, ಸಾ:ಕಲ್ಯಾಣ ನಗರ ಸಿಂದಗಿ. 2] ಅಕ್ಬರ್ ಭಾಗವಾನ ವಯಾ-28 ವರ್ಷ ಸಾ:ಸಿಂದಗಿ. ಸಿಂದಗಿ ಪಟ್ಟಣದ ಡಾ: ಬಿ. ಆರ್. ಅಂಬೇಡ್ಕರ್ ಸರ್ಕಲ್ ಹತ್ತಿರ ಇರುವ ಅಟೋ ಸ್ಟ್ಯಾಂಡ್‌ದಲ್ಲಿ ಸಾರ್ವಜನಿಕ ಸ್ಥಳದಲ್ಲಿ ನಿಂತುಕೊಂಡು 01/- ರೂಪಾಯಿಗೆ 80/-ರೂಪಾಯಿ ಹಣವನ್ನು ಕೊಡುವ ಕರಾರಿನ ಸಾರ್ವಜನಿಕರಿಂದ ಹಣವನ್ನು ತೆಗೆದುಕೊಂಡು ಓ.ಸಿ ಮಟಕಾ ಜೂಜಾಟ ಆಡುತ್ತಿರುವಾಗ ವ ಆಡಿಸುತ್ತಿರುವಾಗ ರೋಖ ಹಣ. 360/-ರೂಗಳು, ಒಂದು ಓ.ಸಿ. ಚೀಟಿ ಹಾಗೂ ಒಂದು ಪೆನ್ನು ಸಮೇತ ಸಿಕ್ಕಿದ್ದು ಅಂತಾ ವಗೈರೆ ಫಿರ್ಯಾದಿಯಲ್ಲಿ ನಮೂದ ಅದೆ. ಜಪ್ತಾದ ವಸ್ತುಗಳ ವಿವರ. ರೋಖ ಹಣ 360/-ರೂಗಳು.ಓ.ಸಿ ಅಂಕಿ ಸಂಖ್ಯೆ ಬರೆದ ಚೀಟಿ ಒಂದು ಅ:ಕಿ: 00=00.ಬಾಲ ಪೆನ್ನು ಒಂದು ಹಳೆದು ಚಾಲು ಸ್ಥಿತಿಯಲ್ಲಿ ಇದ್ದದ್ದು ಅ:ಕಿ: 00=00... ಈ ಬಗ್ಗೆ ಸ:ತ:ಶ್ರೀ ಎಸ್. ಎಚ್. ಹೊಸಮನಿ, ಪಿಎಸ್ಐ(ಕಾ.ಸೂ) ಸಿಂದಗಿ ಪೊಲೀಸ್ ಠಾಣೆ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 19.08.2021 ರಂದು ಸಿಂದಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 264/2021 ಕಲಂ: 302, 201 ಐಪಿಸಿ**

ದಿನಾಂಕ: 13/08/2021 ರಂದು ಸಂಜೆ 06.00 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ ಆತ್ಮಾನಂದ ತಂದೆ ಸಿದ್ರಾಮ ಹಡಗಲಿ, ವಯಾ 35 ವಷ ಸಾ: ಆಹೇರಿ. ಆರೋಪಿತನಾದ ಅಮ್ಮೋಘಿಸಿದ್ದ ತಂದೆ ಪರಶುರಾಮ ಹೊಸಮನಿ ಸಾ: ಗುನ್ನಾಪೂರ ಈತನು ಇದರಲ್ಲಿಯ ಮೃತ ಆತ್ಮಾನಂದ ತಂದೆ ಸಿದ್ರಾಮ ಹಡಗಲಿ, ವಯಾ 35 ವಷ ಸಾ: ಆಹೇರಿ. ಈತನ ಹೆಂಡತಿ ಸರಸ್ವತಿ ಆತ್ಮಾನಂದ ಹಡಗಲಿ ಸಾ: ಆಹೇರಿ ಇವಳೊಂದಿಗೆ ಅನೈತಿಕ ಸಂಬಂಧ ಹೊಂದಿದ್ದು, ಇದಕ್ಕೆ ಸರಸ್ವತಿಯ ಗಂಡ ಆತ್ಮಾನಂದ ಹಡಗಲಿ ಈತನು ತನಗೆ ಅಡ್ಡಿಯಾಗುತ್ತಾನೆ ಅಂತಾ ಭಾವಿಸಿ ಆತನಿಗೆ ಕೊಲೆ ಮಾಡುವ ಉದ್ದಶದಿಂದ ಆಹೇರಿ ಗ್ರಾಮದಿಂಧ ಆತನಿಗೆ ತನ್ನ ಮೊಟಾರ್ ಸೈಕಲ್ ಮೇಲೆ ಕರೆದುಕೊಂಡು ಬಂದು ದಿನಾಂಕ: 13/08/2021 ರಂದು ಸಂಜೆ 06.00 ಗಂಟೆಯಿಂದ ದಿನಾಂಕ: 14/08/2021 ರ ಬೆಳಿಗ್ಗೆ 08.00 ಗಂಟೆಯ ನಡುವಿನ ಅವಧಿಯಲ್ಲಿ ವಿಜಯಪುರ ಸಿಂದಗಿ ರಸ್ತೆಯ ಕೆನಾಲ್ ಬ್ರಿಜ್ ಹತ್ತಿರ ಕೊಲೆ ಮಾಡಿ, ನಂತರ ಶವವನ್ನು ಉರುಲು ಹಾಕಿಕೊಂಡು ತೀರಿಕೊಂಡಿರುತ್ತಾನೆ ಅನ್ನುವ ರೀತಿಯಲ್ಲಿ ಸಾಕ್ಷಿ ಪುರಾವೆ ನಾಶಪಡಿಸುವ ಉದ್ದೇಶದಿಂದ ಶವವನ್ನು ಕೆನಾಲ್ ನೀರಿನಲ್ಲಿ ಒಗೆದು ಹೋಗಿದ್ದು ಇರುತ್ತದೆ ಅಂತಾ ವಗೈರೆ ಫಿರ್ಯಾದದಲ್ಲಿ ನಮೂದ ಇರುತ್ತದೆ. ಈ ಬಗ್ಗೆ ಮರಗಪ್ಪ ತಂದೆ ಸಿದ್ರಾಮ ಹಡಗಲಿ ವಯಾ 48 ವರ್ಷ ಜಾತಿ ಹಿಂದು ಮಾದರ ಉದ್ಯೋಗ ಕೂಲಿ ಸಾ: ಆಹೇರಿ. ರವರು ಕೊಟ್ಟ ಪಿರ್ಯಾದಿ ಮೇರೆಗೆ ದಿನಾಂಕ: 19.08,2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 161/2021 ಕಲಂ: 78(3) ಕೆ.ಪಿ. ಆ್ಯಕ್ಟ್**

ದಿನಾಂಕ: 19.08.2021 ರಂದು 1810 ಗಂಟೆಗೆ ಇದರಲ್ಲಿ ಆರೋಪಿತರಾದ 1] ಮಂಜುನಾಥ ತಂ: ಸಿದ್ದಪ್ಪ ಅಂದೇವಾಡಿ ವಯಾ: 25 ವರ್ಷ ಸಾ: ಅಗರಖೇಡ ತಾ: ಇಂಡಿಸಾರ್ವಜನಿಕ ಸ್ಥಳದಲ್ಲಿ ಕುಳಿತು ಸಾರ್ವಜನಿಕರಿಗೆ 1 ರೂಪಾಯಿಗೆ 80 ರೂಪಾಯಿ ಕೊಡುತ್ತೇನೆ. ಓಸಿ ಆಡಲು ಬನ್ನಿರಿ ಅಂತಾ ಕರೆದು ಅವರಿಂದ ಹಣ ಪಡೆದುಕೊಂಡು ಅಂಕಿ ಸಂಖ್ಯೆಗಳ ಆಧಾರದ ಮೇಲೆ ಕಲ್ಯಾಣ ಓ.ಸಿ.ಮಟಕಾ ಅಂಬುವ ಜೂಜಾಟವನ್ನು ಆಡಿಸುತ್ತಿರುವಾಗ ಸಿಕ್ಕಿದ್ದು, ಕಾರಣ ಸದರಿಯವನ ಮೇಲೆ ನಮ್ಮದು ಕಲಂ: 78 (iii) ಕೆ.ಪಿ. ಯ್ಯಾಕ್ಟ ನೇ ಪ್ರಕಾರ ಸರ್ಕಾರಿ ತರ್ಪೆ ಫಿರ್ಯಾದಿ ಇರುತ್ತದೆ. ಸಿಕ್ಕ ಆರೋಪಿತನಿಗೆ ಹಾಗೂ ಜಪ್ತಾದ ಮುದ್ದೆಮಾಲುಗಳಾದ 1] ರೋಖ ಹಣ-750/-ರೂಪಾಯಿಗಳು 2] ಓ.ಸಿ ಅಂಕಿ ಸಂಖ್ಯೆ ಬರೆದ ಚೀಟಿ-ಒಂದು 3] ಬಾಲಪೆನ್-ಒಂದು. ಇವುಗಳನ್ನು ಈ ಕೂಡಾ ಹಾಜರಪಡಿಸಿದ್ದು ಇರುತ್ತದೆ. ಈ ಬಗ್ಗೆ ಸ:ತ: ಮಾಳಪ್ಪ ಪೂಜಾರಿ ಪಿ.ಎಸ್.ಐ ಇಂಡಿ ಗ್ರಾಮೀಣ ಪಿ.ಎಸ್. ರವರು ಕೊಟ್ಟ ಪಿರ್ಯಾದಿ